ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಆಗಸ್ಟ್ 07, 2021

ಸಂಪುಟ : 48 ಸಂಚಿಕೆ : 85 ☎ 254736 ✆ 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com ✉ janathavani@mac.com

# ಕೊರೊನಾ ಸಾವಿಗೆ ಸಮಯ ಮಿತಿ ಬೇಡ

## ಸೋಂಕಿನ ಹತ್ತು ದಿನಗಳ ನಂತರ ಸಾವಾದರೂ ಕೊರೊನಾ ಎಂದು ದಾಖಲಿಸಲು ಸಚಿವ ಭೈರತಿ ಬಸವರಾಜ ಸೂಚನೆ

ದಾವಣಗೆರೆ, ಅ. 7 - ಕೊರೊನಾ ಸೋಂಕಿನ ಹತ್ತು ದಿನಗಳ ನಂತರ ಅಂಗಾಂಗ ವೈಫಲ್ಯ ಉಂಟಾಗಿ ಸಾವು ಸಂಭವಿಸಿದರೂ ಅದನ್ನು ಕೊರೊನಾದಿಂದ ಸಂಭವಿಸಿದ ಸಾವು ಎಂದು ಪರಿಗಣಿಸಿ ಕ್ರಮ ತೆಗೆದುಕೊಳ್ಳುವಂತೆ ಸಚಿವ ಭೈರತಿ ಬಸವರಾಜ್ ಸೂಚಿಸಿದ್ದಾರೆ.

ಕೊರೊನಾ ಹಾಗೂ ಪ್ರವಾಹ ಪರಿಸ್ಥಿತಿ ಕುರಿತಂತೆ ಜಿಲ್ಲಾಡಳಿತ ಭವನದಲ್ಲಿ ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಕೊರೊನಾದಿಂದ ಸಾವು ಸಂಭವಿಸಿದ ಪ್ರತಿ ಕುಟುಂಬಕ್ಕೂ ಪರಿಹಾರ ತಲುಪಬೇಕು. ಹೀಗಾಗಿ ಸಾವುಗಳನ್ನು ದಾಖಲಿಸಬೇಕು ಎಂದು ಹೇಳಿದರು.

ಈ ಬಗ್ಗೆ ಪ್ರಸ್ತಾಪಿಸಿದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಸೋಂಕು ಬಂದ ಹತ್ತು ದಿನಗಳಲ್ಲಿ ಸಾವು ಸಂಭವಿಸಿದರೆ ಕೊರೊನಾ ಸಾವು ಎಂದು ಪರಿಗಣಿಸಲಾಗುತ್ತಿದೆ. ನಂತರ ಅಂಗಾಂಗ ವೈಫಲ್ಯ ಉಂಟಾದರೆ ಕೊರೊನಾ ಸಾವು ಎಂದು ನಮೂದಿಸುತ್ತಿಲ್ಲ ಎಂದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಜಗಳೂರಿನಲ್ಲಿ ಅಧಿಕೃತವಾಗಿ ಕೊರೊನಾದಿಂದ ಮೃತರ ಸಂಖ್ಯೆ 9 ಎಂದು ಹೇಳಲಾಗುತ್ತಿದೆ. ಆದರೆ, ಸಚಿವರೇ 20-22 ಜನರ ಸಾವಿಗೆ ಸಾಂತ್ವನ ಹೇಳಿದ್ದಾರೆ. ನಾವು ಕೈಯಿಂದ ಪರಿಹಾರ ಕೊಟ್ಟಿದ್ದೇವೆ ಎಂದರು.

ಈ ಬಗ್ಗೆ ಉತ್ತರಿಸಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ. ರಾಘವನ್, ಈ- ಜನ್ಮ ತಂತ್ರಾಂಶದಲ್ಲಿ ಸಾವುಗಳನ್ನು ನಮೂದಿಸಲಾಗುತ್ತಿದೆ. ಇದರಲ್ಲಿ 684 ಸಾವುಗಳನ್ನು ದಾಖಲಿಸಲಾಗಿದೆ ಎಂದರು.

ಬಿಪಿಎಲ್ ಹಾಗೂ ಎಪಿಎಲ್ ಭೇದವಿಲ್ಲದೇ ಕೊರೊನಾದಿಂದ ಮೃತರಾದ ಕುಟುಂಬಕ್ಕೆ ಲಕ್ಷ ರೂ. ಪರಿಹಾರ ನೀಡುವಂತೆ ರಾಜ್ಯ ಸರ್ಕಾರದ ಬಳಿ ಪ್ರಸ್ತಾಪಿಸಿರುವುದಾಗಿ ಹೇಳಿದ ಸಚಿವ ಭೈರತಿ ಬಸವರಾಜ್, ಸಾವುಗಳ ಬಗ್ಗೆ ಸರಿಯಾದ ವಿವರಗಳನ್ನು ದಾಖಲಿಸುವಂತೆ ಸೂಚಿಸಿದರು.

ಮುಂದುವರೆದು ಮಾತನಾಡಿದ ಶಾಸಕ ರಾಮಚಂದ್ರ, ಉಚ್ಚಂಗಿದುರ್ಗ ತಮ್ಮ ವಿಧಾನಸಭಾ (2ನೇ ಪುಟಕ್ಕೆ)



### ಶಾಮನೂರು ಹನುಮಪ್ಪನ ದರ್ಶನ ಕೇಳಿದ ಶಾಸಕರು

ಶನಿವಾರ ಹಾಗೂ ಭಾನುವಾರಗಳಂದು ದೇವಸ್ಥಾನಕ್ಕೆ ಪ್ರವೇಶ ನಿರ್ಬಂಧಿಸಿರುವುದನ್ನು ಪ್ರಶ್ನಿಸಿದ ಶಾಸಕ ಎಸ್.ಎ. ರವೀಂದ್ರನಾಥ್, ನಮ್ಮ ಮನೆ ದೇವರು ಶಾಮನೂರು ಹನುಮಂತಪ್ಪನ ದರ್ಶನಕ್ಕೆ ಶನಿವಾರ ಅವಕಾಶ ಇಲ್ಲದಂತಾಗಿದೆ ಎಂದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ನಾನೂ ಸಹ ಹನುಮಂತ ದೇವರ (2ನೇ ಪುಟಕ್ಕೆ)

### ಜುಲೈನಲ್ಲಿ ಲಸಿಕೆ ಇಳಿಕೆ

ಜೂನ್ ತಿಂಗಳಿಗೆ ಹೋಲಿಕೆ ಮಾಡಿದರೆ ಜುಲೈನಲ್ಲಿ ನೀಡಲಾದ ಲಸಿಕೆಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ರಾಜ್ಯ ಸರ್ಕಾರದಿಂದ ಕಳಿಸುವ ಲಸಿಕೆ ಇಳಿಕೆಯಾಗಿರುವುದರಿಂದ ಜನರಿಗೆ ಲಸಿಕೆ ನೀಡುವುದೂ ಕಡಿಮೆಯಾಗಿದೆ ಎಂದು ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಲಸಿಕೆ ಪಡೆಯುವ (2ನೇ ಪುಟಕ್ಕೆ)

## ಮಳೆಯಿಂದ 38 ಕೋಟಿ ರೂ. ನಷ್ಟ

### ಪರಿಹಾರಕ್ಕಾಗಿ ಸಿಎಂ ಬಳಿ ಪ್ರಸ್ತಾವನೆ : ಭೈರತಿ

ದಾವಣಗೆರೆ, ಆ. 6 - ಜಿಲ್ಲೆಯಲ್ಲಿ ಮಳೆ - ಪ್ರವಾಹದಿಂದಾಗಿ 38 ಕೋಟಿ ರೂ.ಗಳ ನಷ್ಟವಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಮಾತನಾಡಿ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳುವುದಾಗಿ ಸಚಿವ ಬೈರತಿ ಬಸವರಾಜ ತಿಳಿಸಿದ್ದಾರೆ.

ಪ್ರವಾಹ ಪರಿಸ್ಥಿತಿ ಕುರಿತು ಜಿಲ್ಲಾಡಳಿತ ಭವನದಲ್ಲಿ ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೊಂಡಜ್ಜಿಯಲ್ಲಿ ಸೇತುವೆ ಹಾಗೂ ರಸ್ತೆಗೆ ಹಾನಿಯಾಗಿದೆ. 2.5 (2ನೇ ಪುಟಕ್ಕೆ)

### ಉಸ್ತುವಾರಿ ಭೈರತಿಗೆ ಎರಡನೇ ಇನ್ನಿಂಗ್ಸ್

ದಾವಣಗೆರೆ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಬೈರತಿ ಬಸವರಾಜ ಅವರೇ ಮತ್ತೆ ಬರಲಿದ್ದಾರೆ ಎಂದು ಶಾಸಕರಾದ ಎಸ್.ವಿ. ರಾಮಚಂದ್ರ ಹಾಗೂ ಮಾಡಾಳ್ ವಿರೂಪಾಕ್ಷಪ್ಪ ಇಂಗಿತ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಭೈರತಿ ಅವರನ್ನು ಸನ್ಮಾನಿಸಿದ ಶಾಸಕ ಎಸ್.ವಿ. ರಾಮಚಂದ್ರ, ಎರಡನೇ ಇನ್ನಿಂಗ್ಸ್‌ಗೆ ಸ್ವಾಗತ ಎಂದರು. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರೂ ಸಹ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು. ಜಿಲ್ಲಾಡಳಿತ ಪ್ರಕಟಿಸಿದ ಸಭೆಯ ಅಜೆಂಡಾದಲ್ಲೂ ಸಹ ಭೈರತಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಂದೇ ಸಂಬೋಧಿಸಲಾಗಿತ್ತು.

# ರಾತ್ರಿ ಕರ್ಫ್ಯೂ 9 ಗಂಟೆಯಿಂದಲೇ

## ಗಡಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಜಾರಿ

ಬೆಂಗಳೂರು, ಆ. 6 - ಕೊರೊನಾದ 3ನೇ ಅಲೆ ರಾಜ್ಯಕ್ಕೆ ಅಪ್ಪಳಿಸಬಹುದೆಂಬ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ವಿಧಿಸಲಾಗಿರುವ ರಾತ್ರಿ ಕರ್ಫ್ಯೂ ಅನ್ನು 10 ಗಂಟೆಗೆ ಬದಲಾಗಿ 9 ಗಂಟೆಯಿಂದ ಮುಂಜಾನೆ 5 ಗಂಟೆಯವರೆಗೂ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಕೇರಳ ಮತ್ತು ಮಹಾರಾಷ್ಟ್ರ ಗಡಿ ಭಾಗದ ಮೈಸೂರು, ಕೊಡಗು, ಚಾಮರಾಜನಗರ, ದಕ್ಷಿಣ ಕನ್ನಡ, ಬೆಳಗಾವಿ, ವಿಜಾಪುರ, ಬೀದರ್ ಹಾಗೂ ಗುಲಬರ್ಗ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಮತ್ತೆ ಜಾರಿಗೊಳಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೋವಿಡ್ ನಿರ್ವಹಣೆ ಸಂಬಂಧ ಗೃಹ ಕಚೇರಿ ಕೃಷ್ಣಾದಲ್ಲಿ ತಜ್ಞರು, ಅಧಿಕಾರಿಗಳು ಹಾಗೂ ಸಚಿವರೊಟ್ಟಿಗೆ ಸುದೀರ್ಘ ಸಭೆ ನಡೆಸಿದ ನಂತರ ಈ ಕಠಿಣ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಏರುಗತಿ ಕಾಣುತ್ತದೆ. ತಜ್ಞರು ನೀಡಿದ ಸಲಹೆಯಂತೆ ಈಗಾಗಲೇ ಗಡಿಯಲ್ಲಿ ಬಿಗಿ ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿದರು.

ಜೊತೆಗೆ ವಾರಾಂತ್ಯದಲ್ಲಿ ಜನದಟ್ಟಣೆ ಹಾಗೂ ಅನಗತ್ಯವಾಗಿ ಜನರು ಬೀದಿಗಿಳಿಯಬಾರದೆಂಬ ಉದ್ದೇಶದಿಂದ ಶುಕ್ರ ವಾರ ರಾತ್ರಿ 9 ರಿಂದ ಸೋಮವಾರ ಬೆಳಿಗ್ಗೆ 5 ರವರೆಗೂ ಕರ್ಫ್ಯೂ ಜಾರಿಗೊಳ್ಳಲಿದೆ ಎಂದವರು ಹೇಳಿದ್ದಾರೆ.

ಕರ್ಫ್ಯೂ ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಪೂರ್ಣ ಅಧಿಕಾರವನ್ನು ಪೊಲೀಸ್ ಇಲಾಖೆಗೆ (2ನೇ ಪುಟಕ್ಕೆ)

### ಆ.23ರಿಂದ 9ರಿಂದ 12ನೇ ತರಗತಿಗಳು ಆರಂಭ

ಸದ್ಯಕ್ಕೆ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಆರಂಭಿಸುವುದಿಲ್ಲ. ಆದರೆ, 9 ರಿಂದ 12ನೇ ತರಗತಿಗಳನ್ನು ಆಗಸ್ಟ್ 23 ರಿಂದ ಪ್ರಾರಂಭಿಸಲಾಗುವುದು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸೆಪ್ಟೆಂಬರ್ ಮೊದಲ ವಾರದಲ್ಲಿ ಕೋವಿಡ್ ಪರಿಸ್ಥಿತಿಯನ್ನು ಪರಿಶೀಲಿಸಿ, ಪ್ರಾಥಮಿಕ ಮತ್ತು ಪ್ರೌಢ ತರಗತಿಗಳನ್ನು ಆರಂಭಿಸುವ ಬಗ್ಗೆ ಮುಂದೆ ನಿರ್ಣಯ ಕೈಗೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಕೋವಿಡ್ ಮುನ್ನೆಚ್ಚರಿಕೆಯಾಗಿ ವಿದ್ಯಾರ್ಥಿಗಳಿಗೆ ದಿನ ಬಿಟ್ಟು ದಿನ ತರಗತಿ ನಡೆಸಲಾಗುವುದು. ವಾರಕ್ಕೆ ಮೂರು ದಿನ ತಂಡಗಳಾಗಿ ವಿಂಗಡಿಸಿ, ಗುಂಪು ಗೂಡದಂತೆ ಸೋಂಕು ನಿಯಮಾವಳಿಗಳನ್ನು ಪಾಲಿಸಿಕೊಂಡು, ಶಾಲೆಗಳನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದರು.

ಈ ಸಂಬಂಧ ಯಾವ ರೀತಿ ತರಗತಿಗಳು ನಡೆಯಬೇಕೆಂಬುದರ ಬಗ್ಗೆ ಶಿಕ್ಷಣ ಇಲಾಖೆ ಪ್ರತ್ಯೇಕವಾಗಿ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಿದೆ ಎಂದು ಬೊಮ್ಮಾಯಿ ತಿಳಿಸಿದರು.

## ಖೇಲ್ ರತ್ನಕ್ಕೆ ರಾಜೀವ್ ಗಾಂಧಿ ಬದಲು ಧ್ಯಾನ್ ಚಂದ್ ಹೆಸರು

ನವದೆಹಲಿ, ಆ. 6 - ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಖೇಲ್ ರತ್ನ ಪ್ರಶಸ್ತಿಗೆ ಇದ್ದ ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಹೆಸರು ಬದಲಿಸಿ, ಅದಕ್ಕೆ ಹಾಕಿ ಮಾಂತ್ರಿಕ ಆಟಗಾರ ಧ್ಯಾನ್ ಚಂದ್ ಅವರ ಹೆಸರಿಡಲಾಗಿದೆ. ಟೋಕಿಯೋ ಒಲಂಪಿಕ್ಸ್‌ನಲ್ಲಿ ಭಾರತೀಯ ಮಹಿಳಾ ಹಾಗೂ ಪುರುಷರ ಹಾಕಿ ತಂಡ ಗಮನಾರ್ಹ ಸಾಧನೆ ಮಾಡಿದ ಬೆನ್ನಲ್ಲೇ ಕೇಂದ್ರ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಖೇಲ್ ರತ್ನಕ್ಕೆ ಮೇಜರ್ ಧ್ಯಾನ್ ಚಂದ್ ಹೆಸರಿಡುವಂತೆ ಹಲವಾರು ನಾಗರಿಕರು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

## ಕೊಂಡಜ್ಜಿ - ಗಂಗನರಸಿ ಸೇತುವೆಗೆ 2 ಕೋಟಿ ರೂ.

### ಕಾಮಗಾರಿಗೆ ಶೀಘ್ರ ಚಾಲನೆ : ಸಚಿವ ಭೈರತಿ



ಹರಿಹರ, ಆ.6- ಕೊಂಡಜ್ಜಿ ಮತ್ತು ಗಂಗನರಸಿ ಗ್ರಾಮದ ಸಂಪರ್ಕ ಸೇತುವೆ ನಿರ್ಮಾಣ ಮಾಡಲು 2 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿ, ಶೀಘ್ರವೇ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಕೊಂಡಜ್ಜಿ ಗ್ರಾಮದಲ್ಲಿ ಇತ್ತೀಚಿಗೆ ಸುರಿದ ಭಾರೀ ಮಳೆಯಿಂದ ಹಾನಿಗೀಡಾದ ಸೇತುವೆಯ ವೀಕ್ಷಣೆ ಹಾಗೂ ಗ್ರಾಮದಲ್ಲಿ ಮನೆಗಳಿಗೆ ಹಾನಿಯಾದ ಸ್ಥಳವನ್ನು ಪರಿಶೀಲನೆ ನಡೆಸಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಸಾರಥಿ ಮತ್ತು ಚಿಕ್ಕಬಿದರಿ ಗ್ರಾಮದ ಸಂಪರ್ಕ ಸೇತುವೆ ಕೆಲಸವನ್ನು ಸಹ ಶೀಘ್ರವಾಗಿ ಮಾಡಲಾಗುತ್ತದೆ. ಸೇತುವೆ ನಿರ್ಮಾಣದ ವಿಚಾರವಾಗಿ ಇತ್ತೀಚೆಗೆ ನಡೆದ ಹೋರಾಟದಲ್ಲಿ ಪಾಲ್ಗೊಂಡಿದ್ದವರ ವಿರುದ್ಧ ಪ್ರಕರಣಗಳು ದಾಖಲು ಮಾಡಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಜಿಲ್ಲಾಧಿಕಾರಿಗಳ ಬಳಿ ಮಾಹಿತಿ ಪಡೆದು ತಿಳಿಸುವುದಾಗಿ ಹೇಳಿದರು.

ನಂತರ ಗ್ರಾಮದಲ್ಲಿ ಆರ್. ಆಶಾ ಮಂಜುನಾಥ್ ಎಂಬುವವರ ಮನೆ ಬಿದ್ದಿದ್ದು, ಸ್ಥಳಕ್ಕೆ ಸಚಿವರು ಭೇಟಿ ನೀಡಿ ಪರಿಶೀಲಿಸಿದರು. ಮಳೆಯಿಂದ ಸಂಪೂರ್ಣ ಹಾನಿ ಗೊಳಗಾದ ಮನೆಗಳಿಗೆ 5 ಲಕ್ಷ ರೂ. ಪರಿಹಾರ ನೀಡುವುದಕ್ಕೆ ಸರ್ಕಾರದಿಂದ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಶೇ. 70 ರಿಂದ 80 ರಷ್ಟು ಪ್ರಮಾಣದಲ್ಲಿ ಹಾನಿಯಾದ ಮನೆಗಳಿಗೆ 3 ರಿಂದ 4 ಲಕ್ಷ ರೂ. ಪರಿಹಾರ ನೀಡುವುದಾಗಿ ಅವರು ಹೇಳಿದರು.

ನೂತನ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿಗಳು ಆದಷ್ಟು ಎಲ್ಲಾ ವರ್ಗದವರಿಗೂ ಆದ್ಯತೆ ನೀಡಿದ್ದಾರೆ. ಶಾಸಕರೆಲ್ಲರಿಗೂ (2ನೇ ಪುಟಕ್ಕೆ)

## ಪ್ರತಿ ಶನಿವಾರ, ಭಾನುವಾರ ದುಗ್ಗಮ್ಮನ ದರ್ಶನ ಇಲ್ಲ



ದಾವಣಗೆರೆ, ಆ.6- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ಭಕ್ತಾದಿಗಳಿಗೆ ದರ್ಶನ ಇರುವುದಿಲ್ಲ ಎಂದು ದೇವಸ್ಥಾನ ಟ್ರಸ್ಟ್ ತಿಳಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಿರತಿ ಶನಿವಾರ ಮತ್ತು ಭಾನುವಾರ ಹೊರತುಪಡಿಸಿ, ಉಳಿದ ದಿನಗಳಲ್ಲಿ ದೇವಿ ದರ್ಶನ ಇದ್ದು, ಭಕ್ತಾದಿಗಳು ಮಾಸ್ಕ್‌ನೊಂದಿಗೆ ವ್ಯಕ್ತಿಗತ ಅಂತರ ಕಾಪಾಡಿಕೊಂಡು ದರ್ಶನ ಪಡೆಯುವುದು ಎಂದು ಧರ್ಮದರ್ಶಿ ಗೌಡ್ರು ಚನ್ನಬಸಪ್ಪ ತಿಳಿಸಿದ್ದಾರೆ.






## ಡಾ. ಎ.ಎಂ. ಶಿವಕುಮಾರ್ ಅವರಿಗೆ ಪುತ್ರ ವಿಯೋಗ



ದಾವಣಗೆರೆ ಅಂದನೂರು ಮಹಾಲಿಂಗಪ್ಪ (ಮೇಷ್ಟ್ರು) ಅವರ ಮೊಮ್ಮಗ ಹಾಗೂ ಹೆಸರಾಂತ ಕಿವಿ, ಮೂಗು, ಗಂಟಲು ವೈದ್ಯರಾದ ಡಾ.ಎ.ಎಂ. ಶಿವಕುಮಾರ್ ಅವರ ಪುತ್ರ **ಚಿ|| ಎ.ಎಸ್. ಪೂರ್ಣಚಂದ್ರ** ಅವರು, ದಿನಾಂಕ 06.08.2021ರ ಶುಕ್ರವಾರ ರಾತ್ರಿ 10.30ಕ್ಕೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 34 ವರ್ಷ ವಯಸ್ಸಾಗಿತ್ತು.

ತಂದೆ - ತಾಯಿ, ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.08.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು,
**ಶ್ರೀಮತಿ ಅಂದನೂರು ಬಸಮ್ಮ ಮಹಾಲಿಂಗಪ್ಪ ಮೇಷ್ಟ್ರು ಮತ್ತು ಮಕ್ಕಳು**
**ಹೊನ್ನಾಳಿ ಬಂಧುಗಳು ಹಾಗೂ ಮಿತ್ರರು.**
94486-62535, 90352-08400

|| ಶ್ರೀ ಹೋರಿ ಹೊಳೆ ಬಸವೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ||, ಜಿ|| ಶಾಮನೂರು ಗ್ರಾಮದ ವಾಸಿ
**ಶ್ರೀಮತಿ ಅನ್ನಪೂರ್ಣಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 03.08.2021ನೇ ಮಂಗಳವಾರ ಸಂಜೆ 8.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಹೆಚ್. ನಾಗೇಂದ್ರಪ್ಪನವರು**
(ದಿ|| ಶ್ರೀಮತಿ ಕಮಲಮ್ಮ ದಿ|| ಹನುಮಪ್ಪನವರ ಜೇಷ್ಠ ಪುತ್ರ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
ದಿನಾಂಕ : 07.08.2021ನೇ ಶನಿವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ನಗರದ ನೂತನ ಕಾಲೇಜ್ ಪಕ್ಕ, ಎಲ್‌ಐಸಿ ಕಾಲೋನಿಯ "ಬಸವೇಶ್ವರ" ನಿಲಯದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀ ಯಲವಟ್ಟಿ ಮಹಾದೇವಪ್ಪ ಮತ್ತು ಸಹೋದರರು**
**ಮೃತರ ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಯಲವಟ್ಟಿ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು. ಫೋ. : 98860 45541**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಮಳಲಕೆರೆ ಮಠದ ಸಿದ್ದಯ್ಯ ನಿಧನ



ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದ ವಾಸಿ
**ಕಂಟ್ರ್ಯಾಕ್ಟರ್ ಮಠದ ಸಿದ್ದಯ್ಯ**
ಇವರು ದಿನಾಂಕ 6.08.2021ರ ಶುಕ್ರವಾರ ಬೆಳಗಿನ ಜಾವ 5.15ಕ್ಕೆ ನಿಧನರಾದರು. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.08.2021ರ ಶುಕ್ರವಾರ ಸಂಜೆ 4 ಗಂಟೆಗೆ ಮೃತರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದಲ್ಲಿ ನೆರವೇರಿತು.

**ದುಃಖತಪ್ತರು ಕುಟುಂಬ ವರ್ಗ**
ಮೊ. : 97310 13687, 99004 37924, 99029 10837

ಶ್ರೀ ಮಠದ ಸಿದ್ದಯ್ಯ ಅವರ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 14.08.2021ರ ಶನಿವಾರ ಅವರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

# ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಸಿಗಲಿ

## ಹರಪನಹಳ್ಳಿ : ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಒತ್ತಾಯ



ಹರಪನಹಳ್ಳಿ, ಆ.6- ರೈತರು ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆ ಸಿಗಬೇಕು. ರೈತರು ವಿವಿಧ ಬೆಳೆಗಳನ್ನು ಬೆಳೆಯಬೇಕು. ರೈತರು ಹೆಚ್ಚಾಗಿ ಸಾವಯವ ಗೊಬ್ಬರವನ್ನು ಬಳಸಬೇಕು ಎಂದು ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಅರಸೀಕೆರೆಯ ಕೋಲಶಾಂತೇಶ್ವರ ಮಠದಲ್ಲಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಅವರು ಮಾತನಾಡಿದರು. ಕೃಷಿಯಿಂದಲೇ ಮಠದ ಕಟ್ಟಡಗಳನ್ನು ಕಟ್ಟಿದ್ದೇನೆ. ಕಲ್ಯಾಣ ಕರ್ನಾಟಕ ಯೋಜನೆಯ ಅಡಿಯಲ್ಲಿ ಬರುವ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು.

ಸಂಘದ ಕುಮಾರಸ್ವಾಮಿ ಮಾತನಾಡಿ, ಕಲ್ಯಾಣ ಕರ್ನಾಟಕ ಯೋಜನೆಯಡಿ ಯಲ್ಲಿ ಗ್ರಾಮಗಳ ವಿಕಾಸ, ಕೃಷಿ, ಆರೋಗ್ಯ, ಶಿಕ್ಷಣ, ಸ್ವಯಂ ಉದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ಗ್ರಾಮಗಳ ಅಭಿವೃದ್ಧಿ ಮಾಡುವುದೇ ಈ ಯೋಜನೆಯ ಉದ್ದೇಶ ಎಂದು ಹೇಳಿದರು.

ಮುಖಂಡರಾದ ಕಾವಲಹಳ್ಳಿ ನಾಗರಾಜ್, ಕ್ಯಾರಕಟ್ಟೆ ನಂದ್ಯಪ್ಪ, ಐ. ಸಲಾಂ ಸಾಬ್, ಲಕ್ಷ್ಮಣ ಹಾಗೂ ಕಲ್ಯಾಣ ಕರ್ನಾಟಕ ತಂಡದವರು ಹಾಜರಿದ್ದರು.

# ಹಿರೇಗೋಣಿಗೆರೆ ಗ್ರಾ.ಪಂ. ಅಧ್ಯಕ್ಷರಾಗಿ ಮಧು ಶಿವಪ್ಪ



ಹೊನ್ನಾಳಿ, ಆ.6- ತಾಲ್ಲೂಕಿನ ಹಿರೇಗೋಣಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಡಿ.ಎಂ. ಮಧು ಶಿವಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಂ.ಎನ್. ಜ್ಯೋತಿ ಅಣ್ಣಪ್ಪ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಧು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಸಾಸ್ವೆಹಳ್ಳಿ ಕೆವಿಎನ್ನೆನ್ನೆಲ್ ಎಇಇ ಜಿ.ಇ. ರಾಜೇಂದ್ರಪ್ಪ ಘೋಷಿಸಿದರು.

ಗ್ರಾ.ಪಂ. ಉಪಾಧ್ಯಕ್ಷ ಕೆ. ಬಸವಣ್ಯಪ್ಪ, ಸದಸ್ಯರಾದ ಎಚ್.ವಿ. ನಾಗಪ್ಪ, ಎಂ.ಎನ್. ಜ್ಯೋತಿ ಅಣ್ಣಪ್ಪ, ಪುಟ್ಟಮ್ಮ ಟಿ. ನಾಗೇಂದ್ರಪ್ಪ, ಗಿರಿಜಮ್ಮ ಕೆ.ಪಿ. ಸಿದ್ದಪ್ಪ, ನಸ್ರೀನ್ ಬಾನು ತಬ್ರೇಜ್ ಸಾಬ್, ಸೋಮಪ್ಪ ಮಹದೇವಪ್ಪ, ಲಲಿತಾ ಬಾಯಿ ಟಾಕ್ರಾನಾಯ್ಕ, ಎಸ್. ರವಿಕು ಮಾರ್, ಎಚ್. ಗೀತಮ್ಮ, ಬಸವಣ್ಯಪ್ಪ, ಎ.ಕೆ. ಹನುಮಂತಪ್ಪ, ಮಂಜಮ್ಮ, ಹುಚ್ಚನಗೌಡ, ನಾಗರಾಜ್, ಎಚ್. ಎಸ್. ನಾಗರತ್ನ ಪ್ರಶಾಂತ್, ಎಂ.ಟಿ. ಮಂಜಪ್ಪ, ಶಮೀನಾಬಾನು ಅಮಾನುಲ್ಲಾ ಸಾಬ್, ಪಿಡಿಒ ಎಂ.ವಿ. ರವಿ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಕವಿ ಡಾ. ಸಿದ್ಧಲಿಂಗಯ್ಯ ಕುರಿತು ಕಾರ್ಯಕ್ರಮ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕವಿ, ನಾಡೋಜ ಡಾ. ಸಿದ್ಧಲಿಂಗಯ್ಯ ಬದುಕು-ಬರಹ : ಒಂದು ಮೆಲುಕು ಕುರಿತು ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಪ್ರಾಸ್ತಾವಿಕ ನುಡಿಯನ್ನು ಡಾ. ಹೆಚ್.ಎಸ್ ಮಂಜುನಾಥ ಕುರ್ಕಿ ನಡೆಸಿಕೊಡುವರು. ಡಾ. ಎಂ.ಜಿ ಈಶ್ವರಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮವನ್ನು ಡಾ. ಎ.ಬಿ. ರಾಮಚಂದ್ರಪ್ಪ ಉದ್ಘಾಟಿಸುವರು.

ಬಿ.ಎನ್. ಮಲ್ಲೇಶ್ ಅವರಿಂದ ಉಪನ್ಯಾಸ ನಡೆಯಲಿದೆ. ಎಐಟಿಯುಸಿ ಜಿಲ್ಲಾ ಸಮಿತಿ ನೂತನ ಅಧ್ಯಕ್ಷ ಕೆ. ರಾಘವೇಂದ್ರ ನಾಯರಿ ಅವರಿಗೆ ಸನ್ಮಾನ ಏರ್ಪಡಿಸಲಾಗಿದೆ. ಎ.ಆರ್. ಉಜ್ಜನಪ್ಪ ಉಪಸ್ಥಿತರಿರುವರು.

# ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶೇಖರಪ್ಪ ನಗರ ಮಸೀದಿ ಹಿಂಭಾಗ, ರಂಭಾಪುರಿ ರಸ್ತೆ, ಮಹಾವೀರ ಭವನ, ಆರ್‌ಎಮ್‌ಸಿ ಲಿಂಕ್ ರಸ್ತೆ, ಗುಜರಿ ಲೈನ್, ಬಂಬೂಬಜಾರ್, ಬಿ.ಟಿ ಲೇಔಟ್, ಎಲ್‌ಬಿಎಸ್ ನಗರ, ಆನೆಕೊಂಡ, ಇಮಾಂನಗರ, ಬಿಡಿಓ ಆಫೀಸ್, ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು, ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಅಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸಾ ಮಸೀದಿ ಹಿಂಭಾಗ, ಬೀಡಿ ಲೇಔಟ್, ಅಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫಾ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾ ಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆ.ಆರ್. ರಸ್ತೆ, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಬೇತೂರು ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೋಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ, ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್ ರಸ್ತೆ, ಸಿದ್ಧರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್ (ಬೇತೂರು ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು, ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತ ಇಂದು 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಸಹಿ ಮಾಡಿರುವ ನಾನು ನಮ್ಮ ಪಕ್ಷಗಾರರಾದ ಪ್ರವೀಣ್ ಎ.ಎನ್. ತಂದೆ ಎ.ವೈ. ನಾಗರಾಜರಾವ್ ದಾವಣಗೆರೆ ನಗರ, ಆಂಜನೇಯ ಬಡಾವಣೆ, ಬಿ.ಐ.ಇ.ಟಿ. ಬಾಯ್ಸ್ ಹಾಸ್ಟೆಲ್ ಹತ್ತಿರ, ಮನೆ ನಂ. 1831/1, 18ನೇ ಕ್ರಾಸ್, ವಾಸಿಯಾದ ಇವರು ಕೊಟ್ಟ ಮಾಹಿತಿ ಮೇರೆಗೆ, ನಾನು ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ಈ ಪ್ರಕಟಣೆಯ ಮೂಲಕ ಕೊಡುವ ಪ್ರಕಟಣೆ, ನೋಟೀಸ್ ಏನೆಂದರೆ. ನಮ್ಮ ಪಕ್ಷಗಾರನು ದಿನಾಂಕ ; 12.07.2021 ರಂದು 1) ಆರ್. ರಹಮತ್ ಉಲ್ಲಾ ತಂದೆ ಆರ್. ಇಸ್ಮಾಯಿಲ್ ಸಾಬ್ 2) ಫಿರ್‌ದೋಸ್‌ಬಾನು ತಂದೆ ಸಿ. ಅಬ್ದುಲ್ ಘನಿಸಾಬ್ 3) ಆರ್. ಸುಮನ್ ಬಾನು ತಂದೆ ಆರ್. ಖಲಂದರ್, 4) ಮುನಾವರ್ ಪಾಷ ತಂದೆ ಆರ್. ಖಲಂದರ್, 5) ಮಹಾಬೂಬ್ ಪಾಷ ತಂದೆ ಆರ್. ಖಲಂದರ್ ಇವರಿಂದ ಜಂಟಿಯಾಗಿ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಯನ್ನು ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದು, ಷೆಡ್ಯೂಲ್ ಆಸ್ತಿಯನ್ನು ದಿನಾಂಕ : 25.08.2021 ರಂದು ನನ್ನ ಪಕ್ಷಗಾರನು ಮೇಲ್ಕಂಡವರಿಂದ ನೋಂದಣಿ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯುವ ಉದ್ದೇಶ ಹೊಂದಿದ್ದು, ಈ ಸಂಬಂಧ, ಈ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಇನ್ನಿತರೆ ಯಾರಾದರೂ ವಾರಸುದಾರರು ಹಕ್ಕು, ಹಿತಾಸಕ್ತಿಯನ್ನು ಹೊಂದಿದವರು ಇದ್ದರೆ, ಅಥವಾ ಅಡಮಾನ ಮಾಡಿಸಿಕೊಂಡಿದ್ದರೆ ಅಥವಾ ಕ್ರಯ ಕರಾರು ಪತ್ರವನ್ನು ಮಾಡಿಸಿ ಕೊಂಡಿದ್ದರೆ /ಯಾವುದೇ ಹಕ್ಕು, ಹಿತ, ಸಂಬಂಧ ಹೊಂದಿದ್ದರೆ ಈ ಪತ್ರಿಕಾ ಪ್ರಕಟಣೆಯಾದ 10 ದಿನಗಳೊಳಗೆ ಮೇಲೆ ಕಾಣಿಸಿದ ನಮ್ಮ ಪಕ್ಷಗಾರರಿಗಾಗಲೀ ಈ ಕೆಳಗಿನ ನನ್ನ ವಿಳಾಸಕ್ಕಾಗಲೀ ಬಂದು ಅಥವಾ ದೂರವಾಣಿಯ ಮುಖಾಂತರವಾದರೂ ತಕರಾರುಗಳಿದ್ದರೆ ಸಲ್ಲಿಸಲು ತಿಳಿಸಲಾಗಿದೆ. ಇಲ್ಲವಾದಲ್ಲಿ ಸಾರ್ವಜನಿಕ ಯಾವುದೇ ವ್ಯಕ್ತಿಯು ನಮ್ಮ ಪಕ್ಷಗಾರನು ಷೆಡ್ಯೂಲ್ ಆಸ್ತಿಯನ್ನು ಮೇಲ್ಕಂಡವರಿಂದ ಕ್ರಯಕ್ಕೆ ಪಡೆಯಲು ತಕರಾರು ಇಲ್ಲವೆಂದು ತಿಳಿದುಕೊಂಡು ನಮ್ಮ ಪಕ್ಷಗಾರನು ದಿನಾಂಕ 25.08.2021 ರಂದು ಷೆಡ್ಯೂಲ್ ಆಸ್ತಿಯನ್ನು ಮೇಲ್ಕಂಡವರಿಂದ ಕ್ರಯಕ್ಕೆ ಪಡೆಯಲಿದ್ದಾರೆ. ನಂತರ ಬಂದ ತಕರಾರುಗಳನ್ನು ಪರಿಶೀಲಿಸಲಾಗುವುದಿಲ್ಲ ತಿಳಿಯುವುದು.

**ಷೆಡ್ಯೂಲ್ :** ಹರಿಹರ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು, ಹೋಬಳಿ, ಶೇರಾಪುರ ಗ್ರಾಮದ ರಿ.ಸ.ನಂ. 5/3 ರಲ್ಲಿ ವಿಸ್ತೀರ್ಣ ಎಕರೆ 5 ಗುಂಟೆ ಇಲ್ಲಾ, (5ಎ-00ಗು) ಆಕಾರ ರೂ. 12.10 ಪೈಸೆವುಳ್ಳ ಮಳೆ ಆಶ್ರಯದ ಖುಷ್ಕಿ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ನೀಲಾನಹಳ್ಳಿ ಗಡಿ, ಪಶ್ಚಿಮಕ್ಕೆ : ಸರ್ವೆ ನಂ. 5/2, ಉತ್ತರಕ್ಕೆ : ಹೆಚ್. ಗಫೂರ್ ಖಾನ್‌ರವರ ಜಮೀನು, ದಕ್ಷಿಣಕ್ಕೆ : ಡಾ ರಾಮಪ್ರಸಾದ್ ಇವರ ಜಮೀನು.

**ಸಹಿ/- ವೈ.ಎಸ್. ಪ್ರದೀಪ್ ವಕೀಲರು**
**# 286/282, 1ನೇ ಮಹಡಿ, ಪಿ.ಜೆ. ಬಡಾವಣೆ,**
**ಸಿ.ಜಿ ಆಸ್ಪತ್ರೆ ರಸ್ತೆ, ದಾವಣಗೆರೆ. ಫೋ. : 9886889040**

**ದಿನಾಂಕ : 07.08.2021**
**ಸ್ಥಳ : ದಾವಣಗೆರೆ.**

## ಹುಟ್ಟುಹಬ್ಬದ ಶುಭಾಶಯಗಳು



ನಗರದ ಪ್ರತಿಷ್ಠಿತ ಅಂಬರ್‌ಕರ್ ಮನೆತನದವರು, ಹಿರಿಯ ಅನುಭವಿ ಜವಳಿ ವ್ಯಾಪಾರಿಗಳು, ಹಿರಿಯ ಲಯನ್ಸ್ ಸದಸ್ಯರೂ, ನಮ್ಮೆಲ್ಲರ ಮಾರ್ಗದರ್ಶಕರೂ ಸರಳ ವ್ಯಕ್ತಿತ್ವದ

**ಶ್ರೀ ಅಂಬರ್‌ಕರ್ ಮದನ್‌ಕುಮಾರ್**

ಅವರಿಗೆ 75ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರಿ ಭಗವಂತನು ಇವರಿಗೆ ಆಯುರಾರೋಗ್ಯ ಕರುಣಿಸಲೆಂದು ಶುಭ ಹಾರೈಸುವ

**ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು**
**ಲಯನ್ಸ್ ಕ್ಲಬ್ ದಾವಣಗೆರೆ.**
**ಲಯನ್ಸ್ ಟ್ರಸ್ಟ್, ದಾವಣಗೆರೆ.**

# ಮಾಯಕೊಂಡ ಸರ್ಕಾರಿ ಐಟಿಐ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಆ.6- ಮಾಯಕೊಂಡದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎನ್.ಸಿ.ವಿ.ಟಿ ಯಿಂದ ಸಂಯೋಜನೆ ಪಡೆದ ಎಲೆಕ್ಟ್ರಿಕಲ್ ಮತ್ತು ಫಿಟ್ಟರ್ ಎರಡು ವೃತ್ತಿಗಳಿಗೆ ತರಬೇತಿ ನೀಡಲಾಗುತ್ತಿದ್ದು, ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಆ.27 ಕೊನೆಯ ದಿನ. ವಿವರಕ್ಕೆ ಸಂಸ್ಥೆಯ ಪ್ರಾಚಾರ್ಯರು ಅಥವಾ ಇಲಾಖೆಯ ಜಾಲತಾಣ www.emptrg.kar.nic.in ಅನ್ನು ಸಂಪರ್ಕಿಸಬಹುದು.

## ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಸಹಿ ಮಾಡಿರುವ ನಾನು ನಮ್ಮ ಪಕ್ಷಗಾರರಾದ ಪ್ರವೀಣ್ ಎ.ಎನ್. ತಂದೆ ಎ.ವೈ. ನಾಗರಾಜರಾವ್ ದಾವಣಗೆರೆ ನಗರ, ಆಂಜನೇಯ ಬಡಾವಣೆ, ಬಿ.ಐ.ಇ.ಟಿ. ಬಾಯ್ಸ್ ಹಾಸ್ಟೆಲ್ ಹತ್ತಿರ, ಮನೆ ನಂ. 1831/1, 18ನೇ ಕ್ರಾಸ್, ವಾಸಿಯಾದ ಇವರು ಕೊಟ್ಟ ಮಾಹಿತಿ ಮೇರೆಗೆ, ನಾನು ಈ ಮೂಲಕ ಸಾರ್ವಜನಿಕರ ಅವಗಾಹನೆಗೆ ಈ ಪ್ರಕಟಣೆಯ ಮೂಲಕ ಕೊಡುವ ಪ್ರಕಟಣೆ ನೋಟಿಸು ಏನೆಂದರೆ. ನಮ್ಮ ಪಕ್ಷಗಾರನು ದಿನಾಂಕ ; 12.07.2021 ರಂದು 1) ಆರ್.ಷಫೀ ಸಾಬ್ ಬಿನ್ ಲೇಟ್ ಆರ್. ಅಬ್ದುಲ್ ರೆಹಮಾನ್ ಸಾಬ್ ಯಾನೆ ಆರ್. ಅಬ್ದುಲ್ ರಹೀಮ್ ಸಾಬ್ 2) ಅಬ್ದುಲ್ ಜಲೀಲ್ ಬಿನ್ ಲೇಟ್ ಆರ್. ಅಬ್ದುಲ್ ರೆಹಮಾನ್ ಸಾಬ್ ಯಾನೆ ಆರ್. ಅಬ್ದುಲ್ ರಹೀಮ್ ಸಾಬ್ 3) ಅಬ್ದುಲ್ ಖಾದರ್ ಬಿನ್ ಲೇಟ್ ಆರ್. ಅಬ್ದುಲ್ ರೆಹಮಾನ್ ಸಾಬ್ ಯಾನೆ ಆರ್. ಅಬ್ದುಲ್ ರಹೀಮ್ ಸಾಬ್, 4) ಆರ್. ನೂರ್ ಅಹ್ಮದ್ ಬಿನ್ ಲೇಟ್ ಆರ್. ಅಬ್ದುಲ್ ರೆಹಮಾನ್ ಸಾಬ್ ಯಾನೆ ಆರ್. ಅಬ್ದುಲ್ ರಹೀಮ್ ಸಾಬ್ ಇವರಿಂದ ಜಂಟಿಯಾಗಿ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಯನ್ನು ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದು, ಷೆಡ್ಯೂಲ್ ಆಸ್ತಿಯನ್ನು ದಿನಾಂಕ : 25.08.2021 ರಂದು ನನ್ನ ಪಕ್ಷಗಾರನು ಮೇಲ್ಕಂಡವರಿಂದ ನೋಂದಣಿ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯುವ ಉದ್ದೇಶ ಹೊಂದಿದ್ದು, ಈ ಸಂಬಂಧ, ಈ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಇನ್ನಿತರೆ ಯಾರಾದರೂ ವಾರಸುದಾರರು ಹಕ್ಕು, ಹಿತಾಸಕ್ತಿಯನ್ನು ಹೊಂದಿದವರು ಇದ್ದರೆ ಅಥವಾ ಅಡಮಾನ ಮಾಡಿಸಿಕೊಂಡಿದ್ದರೆ ಅಥವಾ ಕ್ರಯ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದರೆ /ಯಾವುದೇ ಹಕ್ಕು, ಹಿತ, ಸಂಬಂಧ ಹೊಂದಿದ್ದರೆ ಈ ಪತ್ರಿಕಾ ಪ್ರಕಟಣೆಯಾದ 10 ದಿನಗಳೊಳಗೆ ಮೇಲೆ ಕಾಣಿಸಿದ ನಮ್ಮ ಪಕ್ಷಗಾರರಿಗಾಗಲೀ ಈ ಕೆಳಗಿನ ನನ್ನ ವಿಳಾಸಕ್ಕಾಗಲೀ ಬಂದು ಅಥವಾ ದೂರವಾಣಿಯ ಮುಖಾಂತರವಾದರೂ ತಕರಾರುಗಳಿದ್ದರೆ ಸಲ್ಲಿಸಲು ತಿಳಿಸಲಾಗಿದೆ. ಇಲ್ಲವಾದಲ್ಲಿ ಸಾರ್ವಜನಿಕ ಯಾವುದೇ ವ್ಯಕ್ತಿಯು ನಮ್ಮ ಪಕ್ಷಗಾರನು ಷೆಡ್ಯೂಲ್ ಆಸ್ತಿಯನ್ನು ಕ್ರಯಕ್ಕೆ ಪಡೆಯಲು ತಕರಾರು ಇಲ್ಲವೆಂದು ತಿಳಿದುಕೊಂಡು, ನಮ್ಮ ಪಕ್ಷಗಾರರು ದಿನಾಂಕ 25.08.2021 ರಂದು ಷೆಡ್ಯೂಲ್ ಆಸ್ತಿಯನ್ನು ಮೇಲ್ಕಂಡವರಿಂದ ಕ್ರಯಕ್ಕೆ ಪಡೆಯಲಿದ್ದಾರೆ. ನಂತರ ಬಂದ ತಕರಾರುಗಳನ್ನು ಪರಿಶೀಲಿಸಲಾಗುವುದಿಲ್ಲ ತಿಳಿಯುವುದು.

**ಷೆಡ್ಯೂಲ್ :** ಹರಿಹರ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು ಹೋಬಳಿ, ಶೇರಾಪುರ ಗ್ರಾಮದ ರಿ.ಸ.ನಂ. 5/2 ರಲ್ಲಿ ವಿಸ್ತೀರ್ಣ 4 ಎಕರೆ 2 ಗುಂಟೆ, ಇದರಲ್ಲಿ ಖರಾಬು 2 ಗುಂಟೆ, ನಿವ್ವಳ ಎಕರೆ 4 ಗುಂಟೆ ಇಲ್ಲಾ ಆಕಾರ ರೂ. 9.68 ಪೈಸೆವುಳ್ಳ ಮಳೆ ಆಶ್ರಯದ ಖುಷ್ಕಿ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ: ಇದೇ ಸರ್ವೆ ನಂಬರ್ ಪೈಕಿ ಆರ್. ರಹಮತುಲ್ಲಾ ಮತ್ತು ಆರ್. ಖಲಂದರ್ ಬಿನ್ ಆರ್. ಇಸ್ಮಾಯಿಲ್ ಸಾಬ್ ಇವರ ಜಮೀನು. ಪಶ್ಚಿಮಕ್ಕೆ : ಹಳೇಬಾತಿ ರಸ್ತೆ, ಉತ್ತರಕ್ಕೆ : ಹೆಚ್. ಗಫೂರ್ ಖಾನ್‌ರವರ ಜಮೀನು, ದಕ್ಷಿಣಕ್ಕೆ : ಡಾ. ರಾಮಪ್ರಸಾದ್ ಇವರ ಜಮೀನು.

**ಸಹಿ/- ವೈ.ಎಸ್. ಪ್ರದೀಪ್ ವಕೀಲರು**
**# 286/282, 1ನೇ ಮಹಡಿ, ಪಿ.ಜೆ. ಬಡಾವಣೆ,**
**ಸಿ.ಜಿ ಆಸ್ಪತ್ರೆ ರಸ್ತೆ, ದಾವಣಗೆರೆ. ಫೋ. : 9886889040**

**ದಿನಾಂಕ : 07.08.2021**
**ಸ್ಥಳ : ದಾವಣಗೆರೆ.**

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಲೇ॥ ಜಿ.ಎಸ್. ಚನ್ನಬಸಪ್ಪ ಇವರ ಮಕ್ಕಳಾದ ಶ್ರೀ ಟಿ.ಸಿ. ಸಿದ್ದೇಶ್ ಮತ್ತು ಶ್ರೀ ಟಿ.ಸಿ. ಮಂಜುನಾಥ್, ವಾಸ : #190/1-9, ಬನಶಂಕರಿ ಬಡಾವಣೆ, ದಾವಣಗೆರೆ. (ಮೊ. 9620919124) ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ದಿನಾಂಕ : 14.06.2018ರಲ್ಲಿ ಎಸ್.ಆರ್. ನಂ. 3948/2018-19ರ ನೋಂದಾಯಿತ ಕ್ರಯಪತ್ರದ ಮೂಲಕ ಕೆ. ಪಂಕಜ್‌ಕುಮಾರ್ ಬಿನ್ ಕಾಂತಿಲಾಲ್ ಇವರ ಜಿಪಿಎ ಹೋಲ್ಡರ್ ಆದ ಶಾ ಕಾಂತಿಲಾಲ್ ಬಿನ್ ಪ್ರತಾಪ್‌ಚಂದ್‌ಜಿ ಇವರಿಂದ ನಮ್ಮ ಕಕ್ಷಿದಾರರು ಖರೀದಿ ಮಾಡಿದ್ದು, ನಮ್ಮ ಕಕ್ಷಿದಾರರು ಷೆಡ್ಯೂಲ್ ಸೊತ್ತಿಗೆ ಜಂಟಿ ಮಾಲೀಕರಾಗಿರುತ್ತಾರೆ. ಷೆಡ್ಯೂಲ್ ಸೊತ್ತನ್ನು ಕೆ. ಪಂಕಜ್‌ಕುಮಾರ್ ಇವರು ಹೆಚ್. ರಾಮಚಂದ್ರಪ್ಪ ಬಿನ್ ಮಹದೇವಪ್ಪ ಇವರಿಂದ ದಿನಾಂಕ : 13.04.2017ರಂದು ಎಸ್.ಆರ್.ನಂ. 637/2017-18ರ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ಸದರಿ ಹೆಚ್. ರಾಮಚಂದ್ರಪ್ಪ ಇವರು ಷೆಡ್ಯೂಲ್ ಸೊತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟ ದಿನಾಂಕ : 13.04.2017ರಂದು ಎಸ್‌ಆರ್.ನಂ. 637/2017-18ರ ಅಸಲು ನೋಂದಾಯಿತ ಕ್ರಯಪತ್ರವನ್ನು ನಾನು ದಿನಾಂಕ : 09.12.2019 ರಂದು ದಾವಣಗೆರೆ ಸಿಟಿ, ಬಿಐಇಟಿ ರೋಡ್‌ನಲ್ಲಿ ಜೆರಾಕ್ಸ್ ಮಾಡಿಸಲು ಜೆರಾಕ್ಸ್ ಅಂಗಡಿಗೆ ಹೋದಾಗ ರಸ್ತೆ ಮಧ್ಯದಲ್ಲಿ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಸದರಿ ಅಸಲು ನೋಂದಾಯಿತ ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ವಕೀಲರನ್ನಾಗಲೀ ಸಂಪರ್ಕಿಸಿ ಸದರಿ ದಾಖಲೆಯನ್ನು ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

**ಷೆಡ್ಯೂಲ್ : ದಾವಣಗೆರೆ ಸಿಟಿ, ಶಾಮನೂರು ಗ್ರಾಮದ ರಿ.ಸ.ನಂ. 220/08 ಮತ್ತು 220/20ರಲ್ಲಿ ಮಾಡಿರುವ ಲೇಔಟ್‌ನಲ್ಲಿ ಬರತಕ್ಕ ಸೈಟ್ ನಂ. 8, # 220/8 ವಿಸ್ತೀರ್ಣ 40x62+62.5/2 ಅಡಿವುಳ್ಳ ಸೊತ್ತಿಗೆ ಚಕ್ಕುಬಂದಿ : ಪೂರ್ವ : 12 ಮೀಟರ್ ರಸ್ತೆ, ಪಶ್ಚಿಮ : ಸ.ನಂ.220/1ರ ಪ್ರದೇಶ, ಉತ್ತರ : ಸೈಟ್ ನಂ. 7, ದಕ್ಷಿಣ : ಸೈಟ್ ನಂ. 9 ಈ ಮಧ್ಯೆ ಇರುವ ಸ್ವತ್ತು.**

**ಎ.ಎಂ. ಹೆಗಡೆ**
**# 82/18, 1ನೇ ಮಹಡಿ,**
**ಪಿ.ಬಿ. ರಸ್ತೆ, ದಾವಣಗೆರೆ.**

**ಸಹಿ/- (ಎ.ಎಂ. ಹೆಗಡೆ), ವಕೀಲರು**
**# 612/1, 7ನೇ ಮೇನ್, ಪಿ.ಜೆ. ಬಡಾವಣೆ,**
**ದಾವಣಗೆರೆ-2. ಮೊ.: 94483 05888**

## ದಿ ದಾವಣಗೆರೆ – ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,

ಆಡಳಿತ ಕಛೇರಿ : 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2 ಫೋನ್: 272570

### ಮಾನ್ಯ ಸದಸ್ಯರುಗಳ ಗಮನಕ್ಕೆ

**ಬ್ಯಾಂಕಿನ 2020-2021ನೇ ಸಾಲಿನ 49ನೇ ವಾರ್ಷಿಕ ಮಹಾಸಭೆಯನ್ನು ವಿಡಿಯೋ ಕಾನ್ಫರೆನ್ಸ್** ಮೂಲಕ ಸದ್ಯದಲ್ಲಿಯೇ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರುಗಳು ತಮ್ಮ ಸಮೀಪದ ನಮ್ಮ ಶಾಖೆಗಳಿಗೆ ಕೂಡಲೇ ಭೇಟಿ ನೀಡಿ ತಮ್ಮ ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿಸಿದಲ್ಲಿ ನಮೂದಿಸಿದ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್/ವಾಟ್ಸಾಪ್ ಮೂಲಕ ಲಿಂಕನ್ನು ಕಳುಹಿಸಲಾಗುವುದು. **ವಿಡಿಯೋ ಕಾನ್ಫರೆನ್ಸ್ ಮುಖಾಂತರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ** ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

**ಎನ್.ಎ. ಮುರುಗೇಶ್**
ಅಧ್ಯಕ್ಷರು

**ಎಂ. ಶಿವಲಿಂಗಸ್ವಾಮಿ**
ಪ್ರಧಾನ ವ್ಯವಸ್ಥಾಪಕರು



## ಹರಿಹರ ತಾ.ನಲ್ಲಿ ಕೊರೊನಾ ನಿಯಂತ್ರಣ

ಹರಿಹರ, ಆ.6- ತಾಲ್ಲೂಕಿನಲ್ಲಿ ಕೊರೊನಾ ರೋಗವು ಸಂಪೂರ್ಣವಾಗಿ ನಿಯಂತ್ರಣದಲ್ಲಿದ್ದು, ಇಂದು ಒಬ್ಬರಿಗೆ ಮಾತ್ರ ಕೊರೊನಾ ರೋಗವು ದೃಢಪಟ್ಟಿದ್ದು, ಒಟ್ಟಾರೆಯಾಗಿ ಇಲ್ಲಿಯವರೆಗೆ 18 ಪ್ರಕರಣಗಳು ಇರುವುದಾಗಿ ತಾಲ್ಲೂಕು ವೈದ್ಯಾಧಿಕಾರಿ ಡಾ. ಚಂದ್ರಮೋಹನ್ ತಿಳಿಸಿದರು.

ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ 4, ಹರಿಹರ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 7, ಖಾಸಗಿ ನರ್ಸಿಂಗ್ ಹೋಂನಲ್ಲಿ 2, ಉಳಿದವರು ಮನೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಕ್ಕಳಿಗೆ ಚಿಕಿತ್ಸೆ ನೀಡಲು ಪ್ರತ್ಯೇಕವಾಗಿ 15 ಬೆಡ್ ವ್ಯವಸ್ಥೆ ಮಾಡಲಾಗಿದೆ. ಮೂರನೇ ಅಲೆ ನಿಯಂತ್ರಣ ವಿಚಾರವಾಗಿ ವೈದ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ತರಬೇತಿ ನೀಡಲಾಗಿದೆ. ನ್ಯುಮೋನಿಯಾ ಬಗ್ಗೆ ಸಹ ನ್ಯುಮೂಕಲ್ ಲಸಿಕೆಯನ್ನು ಹಾಕುವುದಕ್ಕೆ ತರಬೇತಿಯನ್ನು ಸಹ ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

## ಉಕ್ಕಡಗಾತ್ರಿ : ವಾರಾಂತ್ಯದಲ್ಲಿ ದರ್ಶನಕ್ಕೆ ಅವಕಾಶ ಇಲ್ಲ



ಮಲೇಬೆನ್ನೂರು, ಆ.6- ಕೊರೊನಾ 3ನೇ ಅಲೆ ಹರಡುವ ಭೀತಿಯಿಂದಾಗಿ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಸರ್ಕಾರದ ನಿರ್ದೇಶನದಂತೆ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದುಗೆ ದರ್ಶನ ಶನಿವಾರ ಮತ್ತು ಭಾನುವಾರ ಇರುವುದಿಲ್ಲ ಎಂದು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ. ಶನಿವಾರ ಮತ್ತು ಭಾನುವಾರ ಹೊರತು ಪಡಿಸಿ, ಉಳಿದ ದಿನಗಳಲ್ಲಿ ಗದ್ದುಗೆ ದರ್ಶನಕ್ಕೆ ಮಾತ್ರ ಅವಕಾಶ ಇರುತ್ತದೆ. ತೀರ್ಥ, ಪ್ರಸಾದ, ವಿಶೇಷ ಪೂಜೆ, ವಸತಿ ದಾಸೋಹ ವ್ಯವಸ್ಥೆ ಇರುವುದಿಲ್ಲ.

## ಚಾಲನಾ ಅನುಜ್ಞಾ ಪತ್ರಗಳಿಗೆ ಸ್ಲಾಟ್ ನಿಗದಿಗೆ ಸೂಚನೆ

ದಾವಣಗೆರೆ, ಆ.6- ಲಾಕ್‌ಡೌನ್ ಅವಧಿಯಲ್ಲಿ ನಿಗದಿಯಾಗಿದ್ದ ಚಾಲನಾ ಅನುಜ್ಞಾ ಪತ್ರಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಕಳೆದ ಜೂನ್ 21 ರಿಂದ ಇಲ್ಲಿಯವರೆಗೆ ವಿಲೇವಾರಿ ಮಾಡಲಾಗಿದೆ.

ಕೋವಿಡ್ ಮೂರನೇ ಅಲೆ ಬರುವ ಸಾಧ್ಯತೆ ಇರುವುದರಿಂದ ಹೊಸ ಅರ್ಜಿಗಳ ಸ್ಲಾಟ್‌ಗಳನ್ನು ಮುಂದಿನ 7 ದಿನಗಳಂತೆ ಮಾತ್ರ ಸ್ಲಾಟ್ ನಿಗದಿಪಡಿಸಲು ಸಾರ್ವಜನಿಕರಿಗೆ ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗೆ ಫೋನ್: 9449863485 ಅಥವಾ ನೇರವಾಗಿ ಕಚೇರಿ ಸಂಪರ್ಕಿಸಲು ನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ ಮೂವರಿಗೆ ಪಾಸಿಟಿವ್,19 ಗುಣಮುಖ

ದಾವಣಗೆರೆ, ಆ.6- ಜಿಲ್ಲೆಯಲ್ಲಿ ಶುಕ್ರವಾರ 3 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 19 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸ ಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 2 ಹಾಗೂ ಹರಿಹರದಲ್ಲಿ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 221 ಸಕ್ರಿಯ ಪ್ರಕರಣಗಳಿವೆ. ಒಬ್ಬರಲ್ಲಿ ಬ್ಲಾಕ್ ಫಂಗಸ್ ಪತ್ತೆಯಾಗಿದ್ದು, 24 ಸಕ್ರಿಯ ಪ್ರಕರಣ ಗಳಿವೆ. ಜಿಲ್ಲೆಯಲ್ಲಿ ಕಳೆದೊಂದು ವಾರದ ಅಂಕಿ ಅಂಶಗಳ ಪ್ರಕಾರ ಕೊರೊನಾ ಪಾಸಿಟಿವಿಟಿ ದರ ಶೇ.0.44ರಷ್ಟಿದೆ. ಮರಣ ದರ ಶೂನ್ಯಕ್ಕೆ ಇಳಿದಿದೆ. ರಾಜ್ಯದ ಸರಾಸರಿ ಪಾಸಿಟಿವಿಟಿ ದರ ಶೇ.1.12ರಷ್ಟಿದೆ.


ನಿರುದ್ಯೋಗಿಗಳ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ

ಕಡಿಮೆ ಬಂಡವಾಳದಲ್ಲಿ ಅಧಿಕ ಮಾರಾಟದ ಜೊತೆ ದಿನಕ್ಕೆ ರೂ. 600/-ಕ್ಕೂ ಹೆಚ್ಚಿನ ಲಾಭಗಳಿಸಲು ಸುವರ್ಣಾವಕಾಶ !!!

(ಸಾಮರ್ಥ್ಯಕ್ಕನುಸಾರವಾಗಿ ಜಾಸ್ತಿ ಗಳಿಸಬಹುದು)




ಸ್ವಉದ್ಯೋಗವು ಸೃಷ್ಟಿಸಲು, ಸ್ವಾವಲಂಬಿ ಬದುಕು ನಡೆಸಲು, ಆಸಕ್ತಿವುಳ್ಳ ನಗರ, ತಾಲೂಕುಗಳು, ಗ್ರಾಮಗಳ ನಿರುದ್ಯೋಗಿಗಳು, ಮಹಿಳೆಯರು, ಸೇವಾ ಸಂಘ-ಸಂಸ್ಥೆಗಳು, ಸ್ವ-ಸಹಾಯ ಸಂಘಗಳು ಇದರ ಉಪಯೋಗವನ್ನು ಪಡೆದು ಕೊಳ್ಳಬಹುದು.

ಕಲಾರಾಣಿ ಮಿಲೆಟ್ ಹೆಲ್ತ್ ಮಿಕ್ಸ್

* ಷರತ್ತುಗಳು ಅನ್ವಯಿಸುತ್ತವೆ

ಸಿರಿಧಾನ್ಯಗಳ ಆಗರಪೌಷ್ಟಿಕಾಂಶ ಮತ್ತು ರೋಗನಿರೋಧಕ ಶಕ್ತಿಗೆ ಆಧಾರ

DHAARMAA INDUSTRY
10th Cross, Anjaneya Badavane, Davanagere
Call : 8296119995, 9480719999








ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ, ದೇವರಾಜ ಅರಸು ಬಡಾವಣೆ ವಾಸಿ
ಶ್ರೀ ಬಾಬು ಮಾಗಿ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 30-7-2021 ನೇ ಶುಕ್ರವಾರ ರಾತ್ರಿ 9-45ಕ್ಕೆ ನಮ್ಮ ಪೂಜ್ಯ ತಂದೆಯವರಾದ
ಶ್ರೀಯುತ ವೀರಬಸಪ್ಪ ಮಾಗಿ
ರೈಸ್ ಕಾರ್ನರ್ ಮಾಲೀಕರು, ಅಕ್ಕಿ ವರ್ತಕರು
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 7-8-2021ನೇ ಶನಿವಾರ ಬೆಳಿಗ್ಗೆ 10-30 ಕ್ಕೆ ಮೃತರ ಸ್ವಗೃಹ, 3ನೇ ಮೇನ್, 3ನೇ ಕ್ರಾಸ್ 'ಸಿ'ಬ್ಲಾಕ್, ದೇವರಾಜ ಅರಸು ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,
✦ ಶ್ರೀಮತಿ ಲತಾ, ಶ್ರೀ ಪಂಚಾಕ್ಷರಿ ✦ ಶ್ರೀಮತಿ ರೂಪಾ, ಶ್ರೀ ಬಾಬು ಮಾಗಿ
✦ ಶ್ರೀಮತಿ ದಾನೇಶ್ವರಿ, ಶ್ರೀ ಎಂ.ವಿ. ಜಯಪ್ರಕಾಶ್ ಮಾಗಿ ✦ ಶ್ರೀಮತಿ ಶಿವಲೀಲಾ ಶ್ರೀ ರಾಜೇಶ್
ಮೊಮ್ಮಕ್ಕಳಾದ : ಮಮತ, ಗಣೇಶ್, ನಿಖಿಲ್ ಮಾಗಿ, ಹರ್ಷ ಮಾಗಿ, ಕಿಶೋರ್ ಮಾಗಿ, ದಿಶಾ, ಶ್ರೇಯಸ್ ಮತ್ತು ಮಾಗಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 94498 07696, 70196 71902.
ಹರ್ಷ ಕಮರ್ಷಿಯಲ್ಸ್ ಜೆ.ಪಿ. ಎಂಟರ್‌ಪ್ರೈಸಸ್
















PRESENT IN 19 COUNTRIES | AVAILABLE IN MORE THAN 130 CITIES IN INDIA | 25 MILLION CUSTOMERS AND COUNTING

OPP: ಬಾಪೂಜಿ ಡೆಂಟಲ್ ಕಾಲೇಜು – ದಾವಣಗೆರೆ maxfashion.com


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte